# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ**

## ಶಾಂತರಸರ ಬದುಕು ಮತ್ತು ಸಾಹಿತ್ಯ

**ಜನ್ಮಶತಮಾನೋತ್ಸವ ವಿಚಾರ ಸಂಕಿರಣ – 28.01.2025**

## ಶರಣ ತತ್ವದ ವೈಚಾರಿಕ ಪರಂಪರೆಯ ರೂವಾರಿ ಶಾಂತರಸರು : ರಹಮತ್ ತರೀಕೆರೆ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಸವಾದಿ ಶರಣರ ಮತ್ತು ತತ್ವ ಪದಕಾರರ ವೈಚಾರಿಕ ಪರಂಪರೆಯ ಕೊಂಡಿಯಾಗಿ ಕೆಲಸ ಮಾಡಿದವರು ಶಾಂತರಸರು. ಶರಣರ ಅನುಭಾವ ಮತ್ತು ಆಧ್ಯಾತ್ಮಿಕ ಪರಂಪರೆ ತತ್ವಪದಕಾರರಲ್ಲಿ ಮುಂದುವರಿದಿರುವುದನ್ನು ಶಾಂತರಸರು ಗುರುತಿಸಿ ಅದನ್ನು ಪ್ರಚಲಿತಕ್ಕೆ ತರುತ್ತಾರೆ ಎಂದು ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ **ಡಾ.ರಹಮತ್ ತರೀಕೆರೆ** ಅವರು ಅಭಿಪ್ರಾಯಪಟ್ಟರು.




ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಸಹಯೋಗದಲ್ಲಿ ಆಯೋಜಿಸಿದ್ದ ಶಾಂತರಸರ ಬದುಕು ಮತ್ತು ಸಾಹಿತ್ಯ ಜನ್ಮಶತಮನೋತ್ಸವ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಡಾ.ರಹಮತ್ ತರೀಕೆರೆ ಅವರು ಮಾತನಾಡಿದರು.

ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ 28ನೇ ಜನವರಿ 2025ರಂದು **ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ**ದ ಸಹಯೋಗದಲ್ಲಿ ಆಯೋಜಿಸಿದ್ದ **ಶಾಂತರಸರ ಬದುಕು ಮತ್ತು ಸಾಹಿತ್ಯ ಜನ್ಮಶತಮಾನೋತ್ಸವ ವಿಚಾರ ಸಂಕಿರಣ**ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಂದುವರೆದು ಮಾತನಾಡುತ್ತ ಶಾಂತರಸರು ಬಸವ ತತ್ವದ ಪ್ರತಿಪಾದಕರಾಗಿದ್ದರೂ, ಎಲ್ಲ ರೀತಿಯ ಸಾಮಾಜಿಕ ಬದಲಾವಣೆಗಳು ಬಸವಣ್ಣನವರ ಕಾಲದಲ್ಲೇ ಆಯಿತು ಎಂಬ ಕುರುಡು ನಂಬಿಕೆಯನ್ನು ಒಪ್ಪುತ್ತಿರಲಿಲ್ಲ. ಶಾಂತರಸರು ಬಸವಣ್ಣ ಪೂರ್ವದಲ್ಲಿ ಮತ್ತು ನಂತರದಲ್ಲಿ ಶರಣ ಚಳುವಳಿಗೆ ಶ್ರಮಿಸಿದ ಹಲವಾರು ಅಜ್ಞಾತ, ಅನಾಮಧೇಯ ಶರಣರನ್ನು, ತತ್ವಪದಕಾರರನ್ನು ಮುನ್ನಲೆಗೆ ತರುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಶಾಂತರಸರು ಜನ ಸಾಮಾನ್ಯರ ಪಡಿಪಾಟಲುಗಳನ್ನು ಸಾಹಿತ್ಯಕ್ಕೆ ಅಳವಡಿಸಿದವರು. ಸಾಹಿತ್ಯದ ಜೊತೆಗೆ ಅವರು ಸಂಗೀತ ಕಲಾ ಪ್ರಕಾರದ ಬೆಳವಣಿಗೆಗೂ ಒತ್ತುಕೊಟ್ಟರು. ಶಾಂತರಸರು ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಭಾಗದಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದ ಉರ್ದು ಭಾಷೆಯನ್ನು ಸಮುದಾಯದ ಆಚೆಗೆ ಕರೆತಂದು ಆ ಭಾಷೆಗೆ ಕವಿ ಪರಂಪರೆ ಮತ್ತು ಸಾಹಿತ್ಯ ಪರಂಪರೆಯನ್ನು ಸೃಷ್ಟಿಸುವಲ್ಲಿ ಕೊಂಡಿಯಾಗಿದ್ದರು ಎಂದರು. ಕಲ್ಯಾಣ ಕರ್ನಾಟಕ ಪ್ರದೇಶದ ಜನರು ಆಳುವ ವರ್ಗದ ಶೋಷಣೆಗೆ ತುತ್ತಾಗಿ ಸಮಸ್ಯೆಗಳನ್ನು ಎದುರಿಸುವ ಸಂದರ್ಭದಲ್ಲಿ ಅವರ ಕಣ್ಣನ್ನು ತೆರಸಿದರು. ಕಲ್ಯಾಣ ಕರ್ನಾಟಕಕ್ಕೆ ವಿಶೇಷ

ಮೀಸಲಾತಿಯನ್ನು ಕಲ್ಪಿಸುವ ಕಾರ್ಯಕ್ಕೆ ಸಾಂಸ್ಕೃತಿಕ ಆಯಾಮವನ್ನು ತಂದುಕೊಟ್ಟಿರುವ ಶಾಂತರಸರ ಬದುಕು ಮತ್ತು ಸಾಹಿತ್ಯದ ಕುರಿತು ಹೊಸ ತಲೆಮಾರಿಗೆ ದಾಟಿಸುವುದು ನಮ್ಮ ಕರ್ತವ್ಯ ಎಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ **ಡಾ. ಡಿ.ವಿ. ಪರಮಶಿವಮೂರ್ತಿ** ಅವರು ಮಾತನಾಡುತ್ತ, ಕನ್ನಡ ವಿಶ್ವವಿದ್ಯಾಲಯವು ಕೇಂದ್ರ ಸಾಹಿತ್ಯ ಅಕಾಡೆಮಿ ಅವರೊಂದಿಗೆ ಶಾಂತರಸರ ಬದುಕು ಮತ್ತು ಸಾಹಿತ್ಯ ಕುರಿತು ಕಾರ್ಯಕ್ರಮವನ್ನು ಆಯೋಜಿಸಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ. ಶಾಂತರಸರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೃಷಿ ಮಾಡಿದ್ದಾರೆ. ಕನ್ನಡ ಕಾವ್ಯ ಲೋಕದಲ್ಲಿ ಗಜಲ್ ಪರಂಪರೆಗೆ ಅಡಿಪಾಯ ಹಾಕಿದವರು ಶಾಂತರಸರು ಎಂದರು. ನಂತರ ಶಾಂತರಸರ ಕವನ ಸಂಕಲನದ ಒಂದು ಕವನವನ್ನು ವಾಚಿಸುವ ಮೂಲಕ ಅಧ್ಯಕ್ಷೀಯ ನುಡಿಗಳನ್ನು ಮುಗಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾದ **ಬಸವರಾಜ ಸಾದರ** ಅವರು ಮಾತನಾಡುತ್ತ ಶಾಂತರಸರ ವ್ಯಕ್ತಿತ್ವ ತುಂಬಾ ವಿಶಿಷ್ಟವಾದುದು. ಅವರು ಹೆಸರಿಗೆ ತಕ್ಕಂತೆ ಶಾಂತವಾಗಿಯೂ ಇದ್ದರು, ಕೆಲವೊಮ್ಮೆ ಕ್ರಾಂತಿಕಾರಿಯು ಆಗುತ್ತಿದ್ದರು. ಶಾಂತರಸರಲ್ಲಿ ಪ್ರತಿಭಟಿಸುವ ಗುಣ ಚಿಕ್ಕಂದಿನಲ್ಲೇ ಕಂಡು ಬರುತ್ತದೆ. ಶಾಂತರಸರು ತಾವು ನಂಬಿದ್ದ ಧೋರಣೆಯನ್ನು ಬದಲಿಸದವರು ಮತ್ತು ಕೈಗೊಂಡ ಕಾರ್ಯಕ್ಕೆ ಯಾವಾಗಲೂ ಬದ್ಧರಾಗಿರುತ್ತಿದ್ದರು. ಶಾಂತರಸರು ಕಾವ್ಯ, ಘಜಲ್, ಕಾದಂಬರಿ, ಗ್ರಂಥಸಂಪಾದನೆ, ಅನುವಾದ ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೆಲಸ ಮಾಡಿದರು. ಬಂಡಾಯವನ್ನು ಸಾಹಿತ್ಯಕ್ಕೆ ಅಳವಡಿಸಿದ ಕೀರ್ತಿಯೂ ಇವರಿಗೆ ಸಲ್ಲುತ್ತದೆ ಎಂದರು.

ವೇದಿಕೆ ಮೇಲಿದ್ದ ಗಣ್ಯರು ಶಾಂತರಸರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿದರು.

ವಿವಿಧ ಗೋಷ್ಠಿಗಳಲ್ಲಿ ಪ್ರಾಧ್ಯಾಪಕರಾದ ಡಾ. ವೆಂಕಟಗಿರಿ ದಳವಾಯಿ, ಡಾ. ಅಮರೇಶ ನುಗಡೋಣಿ, ಡಾ. ಕೆ. ರವೀಂದ್ರನಾಥ, ಭಾಗ್ಯಜ್ಯೋತಿ ಹಿರೇಮಠ, ಸಿ.ಎಸ್. ಭೀಮರಾಯ, ಪ್ರಭು ಖಾನಾಪುರೆ ಇವರು ಶಾಂತರಸರ ವ್ಯಕ್ತಿತ್ವ, ಕಾವ್ಯ, ಘಜಲ್, ನಾಟಕ, ಪ್ರಬಂಧಗಳು, ಸಂಶೋಧನೆ, ಗ್ರಂಥಸಂಪಾದನೆ, ಅನುವಾದ ಮತ್ತು ಸಂಪಾದನೆಗಳ ಕುರಿತು ಪ್ರಬಂಧ ಮಂಡಿಸಿದರು. ಕನ್ನಡದ ಪ್ರಸಿದ್ಧ ಲೇಖಕಿ ಭಾರತಿ ಮೋಹನ ಕೋಟಿ ಸಮಾರೋಪ ಭಾಷಣ ಮಾಡಿದರು. ಕುಲಸಚಿವರಾದ ಡಾ.ವಿಜಯ್ ಪೂಣಚ್ಚ ತಂಬಂಡ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಗೋವಿಂದ ಸಮಾರೋಪದ ವಂದನಾರ್ಪಣೆ ಮಾಡಿದರು.

ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು, ಸಂಶೋಧನಾರ್ಥಿಗಳು ಉಪಸ್ಥಿತರಿದ್ದರು. ಸಂಗೀತ ವಿಭಾಗದ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ವಿಭಾಗದ ಡಾ.ಮಲ್ಲಿಕಾರ್ಜುನಗೌಡ ವಣೇನೂರ ಸ್ವಾಗತಿಸಿದರು. ಸಂಶೋಧನಾರ್ಥಿ ಸಂತೋಷ್ ಕಾರ್ಯಕ್ರಮವನ್ನು ನಿರೂಪಿಸಿದರು.






ವಿಚಾರ ಸಂಕಿರಣದ ಅಧ್ಯಕ್ಷತೆವಹಿಸಿ ಕುಲಪತಿಗಳಾದ ಡಾ.ಡಿ.ವಿ. ಪರಮಶಿವಮೂರ್ತಿ ಅವರು ಮಾತನಾಡಿದರು.



ವೇದಿಕೆ ಮೇಲಿದ್ದ ಗಣ್ಯರು ಶಾಂತರಸರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿದರು.

ಮಾಹಿತಿ ಕೇಂದ್ರ

ಪ್ರಜಾವಾಣಿ ಗುರುವಾರ • ಜನವರಿ 30, 2025

## ‘ಅಜ್ಞಾತ ಶರಣರ ಮುನ್ನೆಲೆಗೆ ತಂದ ಶಾಂತರಸ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಕಲ್ಯಾಣ ಕರ್ನಾಟಕದಲ್ಲಿ ಬಸವಾದಿ ಶರಣರ ಮತ್ತು ತತ್ವಪದಕಾರರ ವೈಚಾರಿಕ ಪರಂಪರೆಯ ಕೊಂಡಿಯಾಗಿ ಕೆಲಸ ಮಾಡಿದವರು ಶಾಂತರಸರು. ಶರಣರ ಅನುಭಾವ ಮತ್ತು ಆಧ್ಯಾತ್ಮಿಕ ಪರಂಪರೆ ತತ್ವಪದಕಾರರಲ್ಲಿ ಮುಂದುವರಿದಿದ್ದನ್ನು ಅವರು ಗುರುತಿಸಿದರು’ ಎಂದು ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ರಹಮತ್ ತರೀಕೆರೆ ಅಭಿಪ್ರಾಯಪಟ್ಟರು.



ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಶಾಂತರಸರ ಬದುಕು, ಬರೆಹ ಕುರಿತು ನಡೆದ ವಿಚಾರಗೋಷ್ಠಿಯಲ್ಲಿ ಗಣ್ಯರು ಪಾಲ್ಗೊಂಡಿದ್ದರು

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಸಹಯೋಗದಲ್ಲಿ ಆಯೋಜಿಸಿದ್ದ ‘ಶಾಂತರಸರ ಬದುಕು ಮತ್ತು ಸಾಹಿತ್ಯ ಜನ್ಮಶತಮಾನೋತ್ಸವ’ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

‘ಬಸವತತ್ವದ ಪ್ರತಿಪಾದಕರೂ ಆಗಿದ್ದ ಅವರು, ಎಲ್ಲ ರೀತಿಯ ಸಾಮಾಜಿಕ ಬದಲಾವಣೆಗಳು ಬಸವಣ್ಣನ ಕಾಲದಲ್ಲೇ ಆಯಿತೆಂಬುದನ್ನು ಒಪ್ಪಿರಲಿಲ್ಲ. ಬಸವಣ್ಣನ ಪೂರ್ವದಲ್ಲಿ ಮತ್ತು ನಂತರದಲ್ಲಿ ಶರಣ ಚಳವಳಿಗೆ ಶ್ರಮಿಸಿದ ಹಲವಾರು ಅಜ್ಞಾತ, ಅನಾಮಧೇಯ ಶರಣರು, ತತ್ವಪದಕಾರರನ್ನು ಮುನ್ನಲೆಗೆ ತರುವ ಕಾರ್ಯದಲ್ಲಿ ತೊಡಗಿಸಿಕೊಂಡರು’ ಎಂದು ಹೇಳಿದರು.

ಕುಲಪತಿ ಪ್ರೊ.ಡಿ.ವಿ. ಪರಮಶಿವಮೂರ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಬಸವರಾಜ ಸಾದರ ಮಾತನಾಡಿದರು. ವಿವಿಧ ಗೋಷ್ಠಿ ನಡೆದವು. ಸಾಹಿತಿ ಭಾರತಿ ಮೋಹನ ಕೋಟಿ, ಕುಲಸಚಿವ ಪ್ರೊ.ವಿಜಯ್ ಪೂಣಚ್ಚ ತಂಬಂಡ ಇದ್ದರು

ವಿಜಯ ಕರ್ನಾಟಕ VK

ಶುಕ್ರವಾರ,31 ಜನವರಿ 2025, ಗಂಗಾವತಿ

ಮಾಹಿತಿ ಕೇಂದ್ರ

### ವಿಶ್ರಾಂತ ಪ್ರಾಧ್ಯಾಪಕ ರಹಮತ್ ತರೀಕೆರೆ ಅಭಿಪ್ರಾಯ

## ಶರಣ ತತ್ವದ ರೂವಾರಿ ಶಾಂತರಸರು

■ ವಿಕ ಸುದ್ದಿಲೋಕ ವಿಜಯನಗರ(ಹೊಸಪೇಟೆ)

ಶರಣ ತತ್ವದ ವೈಚಾರಿಕ ಪರಂಪರೆಯ ರೂವಾರಿ ಶಾಂತರಸರು ಎಂದು ವಿಶ್ರಾಂತ ಪ್ರಾಧ್ಯಾಪಕ ರಹಮತ್ ತರೀಕೆರೆ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಸಹಯೋಗದಲ್ಲಿ ನಡೆದ ಶಾಂತರಸರ ಬದುಕು ಮತ್ತು ಸಾಹಿತ್ಯ ಜನ್ಮಶತಮಾನೋತ್ಸವ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಶಾಂತರಸರು ಬಸವತತ್ವದ ಪ್ರತಿಪಾದಕರಾಗಿದ್ದರೂ, ಎಲ್ಲ ರೀತಿಯ ಸಾಮಾಜಿಕ ಬದಲಾವಣೆಗಳು ಬಸವಣ್ಣನವರ ಕಾಲದಲ್ಲೇ ಆಯಿತು ಎಂಬ ಕುರುಡು ನಂಬಿಕೆ ಒಪ್ಪುತ್ತಿರಲಿಲ್ಲ. ಶಾಂತರಸರು ಬಸವಣ್ಣ ಪೂರ್ವದಲ್ಲಿ ಮತ್ತು ನಂತರದಲ್ಲಿ ಶರಣ ಚಳವಳಿಗೆ ಶ್ರಮಿಸಿದ ಹಲವಾರು ಅಜ್ಞಾತ, ಅನಾಮಧೇಯ ಶರಣರನ್ನು, ತತ್ವಪದಕಾರರನ್ನು ಮುನ್ನೆಲೆಗೆ ತರುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಶಾಂತರಸರು ಜನ ಸಾಮಾನ್ಯರ ಪಡಿಪಾಟಲುಗಳನ್ನು ಸಾಹಿತ್ಯಕ್ಕೆ ಅಳವಡಿಸಿದವರು ಎಂದು ಹೇಳಿದರು.

ಸಾಹಿತ್ಯದ ಜತೆಗೆ ಅವರು ಸಂಗೀತ ಕಲಾ ಪ್ರಕಾರದ ಬೆಳವಣಿಗೆಗೂ ಒತ್ತುಕೊಟ್ಟರು. ಶಾಂತರಸರು ಕಲಬುರಗಿ, ಬೀದರ್ ಮತ್ತು ರಾಯಚೂರು ಭಾಗದಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದ ಉರ್ದು ಭಾಷೆಯನ್ನು ಸಮುದಾಯದ ಆಚೆಗೆ ತಂದು, ಆ ಭಾಷೆಗೆ ಕವಿ ಪರಂಪರೆ ಮತ್ತು ಸಾಹಿತ್ಯ ಪರಂಪರೆ ಸೃಷ್ಟಿಸುವಲ್ಲಿ ಕೊಂಡಿಯಾಗಿದ್ದರು ಎಂದರು.

ಕಲ್ಯಾಣ ಕರ್ನಾಟಕ ಪ್ರದೇಶದ ಜನರು ಆಳುವ ವರ್ಗದ ಶೋಷಣೆಗೆ ತುತ್ತಾಗಿ ಸಮಸ್ಯೆ ಎದುರಿಸುವ ಸಂದರ್ಭದಲ್ಲಿ ಅವರ ಕಣ್ಣು ತೆರೆಸಿದ್ದರು. ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ ಕಾರ್ಯಕ್ಕೆ ಸಾಂಸ್ಕೃತಿಕ ಆಯಾಮ ತಂದುಕೊಟ್ಟಿರುವ ಶಾಂತರಸರ ಬದುಕು ಮತ್ತು ಸಾಹಿತ್ಯವನ್ನು ಹೊಸ ತಲೆಮಾರಿಗೆ ದಾಟಿಸುವುದು ನಮ್ಮ ಕರ್ತವ್ಯ ಎಂದು ತಿಳಿಸಿದರು.

ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಮಾತನಾಡಿ, ಶಾಂತರಸರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೃಷಿ ಮಾಡಿದ್ದಾರೆ. ಕನ್ನಡ ಕಾವ್ಯ ಲೋಕದಲ್ಲಿ ಗಜಲ್ ಪರಂಪರೆಗೆ ಅಡಿಪಾಯ ಹಾಕಿದವರು ಶಾಂತರಸರು ಎಂದು ಹೇಳಿದರು.

ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಬಸವರಾಜ, ಲೇಖಕಿ ಭಾರತಿ ಮೋಹನ ಕೋಟಿ, ನಾನಾ ನಿಕಾಯಗಳ ಡೀನರು, ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಸಂಶೋಧನಾ ವಿದ್ಯಾರ್ಥಿಗಳು ಇದ್ದರು.



ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಶಾಂತರಸರ ಬದುಕು ಮತ್ತು ಸಾಹಿತ್ಯ ಜನ್ಮಶತಮಾನೋತ್ಸವ ವಿಚಾರ ಸಂಕಿರಣದಲ್ಲಿ ವಿಶ್ರಾಂತ ಪ್ರಾಧ್ಯಾಪಕ ರಹಮತ್ ತರೀಕೆರೆ ಮಾತನಾಡಿದರು.

### ಪ್ರಬಂಧ ಮಂಡನೆ

ನಾನಾ ಗೋಷ್ಠಿಗಳಲ್ಲಿ ಪ್ರಾಧ್ಯಾಪಕರಾದ ಡಾ. ವೆಂಕಟಗಿರಿ ದಳವಾಯಿ, ಡಾ.ಅಮರೇಶ ನುಗಡೋಣಿ, ಡಾ.ಕೆ.ರವೀಂದ್ರನಾಥ, ಭಾಗ್ಯಜ್ಯೋತಿ ಹಿರೇಮಠ, ಸಿ. ಎಸ್.ಭೀಮರಾಯ, ಪ್ರಭು ಖಾನಾಪುರೆ ಅವರು ಶಾಂತರಸರ ವ್ಯಕ್ತಿತ್ವ, ಕಾವ್ಯ, ಗಜಲ್, ನಾಟಕ, ಪ್ರಬಂಧಗಳು, ಸಂಶೋಧನೆ, ಗ್ರಂಥ ಸಂಪಾದನೆ, ಅನುವಾದ ಮತ್ತು ಸಂಪಾದನೆಗಳ ಕುರಿತು ಪ್ರಬಂಧ ಮಂಡಿಸಿದರು.

ಸಾಹಿತ್ಯ ಅಕಾದೆಮಿ

ಮತ್ತು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಯುಕ್ತ ಆಶ್ರಯದಲ್ಲಿ

# ಶಾಂತರಸರ ಬದುಕು ಮತ್ತು ಸಾಹಿತ್ಯ

ಜನ್ಮಶತಮಾನೋತ್ಸವ ವಿಚಾರ ಸಂಕಿರಣ

ಮಂಗಳವಾರ, 28 ಜನವರಿ 2025

ಸ್ಥಳ: 'ಭುವನ ವಿಜಯ' ಸಭಾಂಗಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬

ಸಾಹಿತ್ಯಾಸಕ್ತರಿಗೆಲ್ಲರಿಗೂ ಆತ್ಮೀಯ ಸ್ವಾಗತ

## ಕಾರ್ಯಕ್ರಮ

**ಉದ್ಘಾಟನಾ ಸಮಾರಂಭ : ಮುಂಜಾನೆ ೧೧.೦೦ – ಮಧ್ಯಾಹ್ನ ೧೨.೦೦**

ಸ್ವಾಗತ : ಎಂ. ಮಲ್ಲಿಕಾರ್ಜುನ ಗೌಡ ವಣೇನೂರ
ಮುಖ್ಯಸ್ಥರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಾಸ್ತಾವಿಕ : ಬಸವರಾಜ ಸಾದರ
ಸದಸ್ಯರು, ಕೇಂದ್ರ ಸಾಹಿತ್ಯ ಅಕಾದೆಮಿ, ನವದೆಹಲಿ

ಉದ್ಘಾಟನಾ ನುಡಿ : ರಹಮತ್ ತರೀಕೆರೆ
ಕನ್ನಡದ ಪ್ರಸಿದ್ಧ ಲೇಖಕರು

ಅಧ್ಯಕ್ಷೀಯ ನುಡಿ : ಡಿ.ವಿ. ಪರಮಶಿವಮೂರ್ತಿ
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಹಾ

**ಮೊದಲ ಗೋಷ್ಠಿ : ಮಧ್ಯಾಹ್ನ ೧೨.೦೦ – ೧.೩೦**

ಪ್ರಬಂಧ ಮಂಡನೆ : ಅಮರೇಶ ನುಗಡೋಣಿ
ಶಾಂತರಸ : ವ್ಯಕ್ತಿ–ವ್ಯಕ್ತಿತ್ವ
ಭಾಗ್ಯಜ್ಯೋತಿ ಹಿರೇಮಠ
ಶಾಂತರಸರ ಕಾವ್ಯ ಮತ್ತು ಗಜಲ್‌ಗಳು
ಸಿ.ಎಸ್. ಭೀಮರಾಯ
ಶಾಂತರಸರ ಕಥೆ ಮತ್ತು ಕಾದಂಬರಿಗಳು

ಊಟ

**ಎರಡನೆಯ ಗೋಷ್ಠಿ : ಮಧ್ಯಾಹ್ನ ೨.೩೦ – ಸಂಜೆ ೪.೦೦**

ಪ್ರಬಂಧ ಮಂಡನೆ : ವೆಂಕಟಗಿರಿ ದಳವಾಯಿ
ಶಾಂತರಸರ ನಾಟಕ ಮತ್ತು ಪ್ರಬಂಧಗಳು
ಕೆ. ರವೀಂದ್ರನಾಥ
ಶಾಂತರಸರ ಸಂಶೋಧನೆ ಮತ್ತು ಗ್ರಂಥಸಂಪಾದನೆಗಳು
ಪ್ರಭು ಖಾನಾಪುರೆ
ಶಾಂತರಸರ ಅನುವಾದ ಮತ್ತು ಸಂಪಾದನೆಗಳು

ಚಹಾ

**ಸಮಾರೋಪ ಸಮಾರಂಭ ಸಂಜೆ ೪.೦೦ – ೫.೦೦**

ಅಧ್ಯಕ್ಷತೆ : ವಿಜಯ್ ಪೂಣಚ್ಚ ತಂಬಂಡ
ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾರೋಪ ಭಾಷಣ : ಭಾರತಿ ಮೋಹನ ಕೋಟಿ
ಕನ್ನಡದ ಪ್ರಸಿದ್ಧ ಲೇಖಕಿ

ವಂದನಾರ್ಪಣೆ : ಗೋವಿಂದ
ಸಹಾಯಕ ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕವಿಹಂ.

RSVP: 080-22245152
Email: secretary@sahitya-akademi.gov.in / rs.rob@sahitya-akademi.gov.in
Website: www.sahitya-akademi.gov.in

---

Sahitya Akademi

in collaboration with

Department of Kannada Literature Studies

Kannada University, Hampi

cordially invite you to the Birth Centenary Seminar on

# THE LIFE AND LITERATURE OF SHANTARASA

Tuesday, 28th January 2025

Venue : 'Bhuvana Vijaya' Auditorium, Kannada University Hampi
Vidyaranya - 583276

## PROGRAMME

**Inaugural Session : 11 a.m. - 12.00 noon**

Welcome : M. Mallikarjuna Gouda Vanenoor
Head, Dept. of Kannada Literature Studes, Kannada University

Introductory Address : Basavaraj Sadar
General Council Member, Sahithy Akademi, New Delhi

Inaugural Address : Rahamath Tarikere
Eminent Kannada Writer

Presidential Address : D.V. Paramashivamurthy
Vice-Chancellor, Kannada University, Hampi

Tea

**First Session : 12.00 noon - 1.30 p.m.**

Papers Presentation : Amaresh Nugadoni
Shantarasa : Person and Personality
Bhagyajyothi Hiremath
Poetry and Ghazals of Shantarasa
C.S. Bhimaraya
Novels and shorts Stories of Shantarasa

Lunch

**Second Session : 2.30 p.m. - 4.00 p.m.**

Papers Presentation : Venkatagiri Dalavai
Plays and Essays of Shantarasa
K. Ravindranath
Research and Textual Criticism of Shantarasa
Prabhu Khanapure
Translations and Edited Works of Shantarasa

Tea

**Valedictory Session : 4.00 p.m. - 5.00 p.m.**

Chair : Vijay Poonacha Thambanda
Registrar, Kannada University, Hampi

Valedictory Address : Bharati Mohan Koti
Noted Kannada Writer

Vote of thanks : Govinda Assistant Professor
Dept of Kannada Literature Studies, KUH

RSVP: 080-22245152
Email: secretary@sahitya-akademi.gov.in / rs.rob@sahitya-akademi.gov.in
Website: www.sahitya-akademi.gov.in